ಪಿ.ಡಬ್ಲ್ಯೂ1 ಸಿ. ಸಿ.ನಂ. 3773/2021

ದಿನಾಂಕಃ 25-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ ರವರಿಂದಃ

ದಿಃ03-04-2010 ರಂದು ಆರೋಪಿಯು 7 ಚೆಕ್ ಗಳಲ್ಲಿ ಹಣವನ್ನು ಡ್ರಾ ಮಾಡಿದ್ದು ಚೆಕ್ ನಂ. 632953, ದಿಃ 07-04-2010 ಹಣ 35 ಸಾವಿರ. ಚೆಕ್ ನಂ. 632954, ದಿಃ10-04-2010, ಹಣ 40 ಸಾವಿರ. ಈ ರೀತಿ 7 ಚೆಕ್ ಗಳ ಮೂಲಕ 3,32,500. ರೂಗಳ ಹಣವನ್ನು ಡ್ರಾ ಮಾಡಿಕೊಂಡಿರುತ್ತಾರೆ. 5 ಚೆಕ್ ಗಳನ್ನು ಲಕ್ಷ್ಮೀಪತಿ ಖಾತೆಗೆ ಹಾಕಿ 42,57,930/ ರೂಗಳನ್ನು ಖಾತೆಗೆ ವರ್ಗಾವಣೆ ಮಾಡಿರುತ್ತಾರೆ. 2011 ರಲ್ಲಿ ಮುಖ್ಯ ಕಛೇರಿಗೆ ಆರೋಪಿ ಹೋಗಿ ಹಣವನ್ನು ನಾನೇ ದುರುಪಯೋಗಪಡಿಸಿಕೊಂಡಿರುತ್ತೇನೆ ಅಂತ ಪತ್ರವನ್ನು ಬರೆದುಕೊಟ್ಟಿರುತ್ತಾರೆ 2 ಚೆಕ್ ಗಳನ್ನು 35 ಸಾವಿರ ಮತ್ತು 40 ಸಾವಿರ ಗಳಿಗೆ ಕೊಟ್ಟು ಹೆಚ್ಚುವರಿಯಾಗಿ ನಾನು ಕಟ್ಟಬೇಕಾದರೆ ಇನ್ನು ಸಹಿ ಮಾಡಿ ಎರಡು ಖಾಲಿ ಚೆಕ್ ಗಳನ್ನು ನೀಡಿರುತ್ತಾರೆ. ಒಟ್ಟು ಆರೋಪಿ ಸುಮಾರು 1,05,00,000/ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ. ಈ ಎಲ್ಲಾ ವಿವಾದಕ್ಕೆ ಸಂಬಂಧಿಸಿದಂತ ದಾಖಲೆಗಳನ್ನು ಮುಖ್ಯ ಕಛೇರಿಯವರೇ ಇಟ್ಟುಕೊಂಡಿದ್ದು ನನ್ನ ಬಳಿ ಇರುವುದಿಲ್ಲ ನಾನು ದೂರು ಮಾಡಲು ಹೇಳಿದ್ದು ದೂರು ದಾಖಲು ಮಾಡಿರುತ್ತೇನೆ.

ನಾನು ದೂರು ದಾಖಲು ಮಾಡಿದ ನಂತರ ದಿಃ14-07-2011 ರಂದು ನೋಡಿ ಎನ್ ಆರ್ ಕಾಲೋನಿ ವಾಸವಿ ಕಲ್ಯಾಣ ಮಂಟಪ ರಸ್ತೆ, ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಬಂದು ಅಪರಾದಿ ಬಳುತ್ತಿದ್ದ ಕೋಣೆಯಲ್ಲಿ ಬ್ಯಾಂಕ್ ಸ್ಟೇಟ್ ಮೆಂಟ್ ಗಳನ್ನು ನಕಲಿ ಮಾಡಿ ಇಟ್ಟಿದ್ದು ಬ್ಯಾಂಕ್ ಸೀಲ್ ಅನ್ನು ನಕಲಿ ಮಾಡಿ ಇಟ್ಟುಕೊಂಡಿದ್ದು ಬ್ಯಾಂಕ್ ನ ಕ್ಯಾಷಿಯರ್ ಸೀಲ್ ಅನ್ನು ನಕಲಿ ಮಾಡಿ ಇಟ್ಟುಕೊಂಡಿದ್ದು, ಮೇಲಾಧಿಕಾರಿಯವರು ಬ್ಯಾಂಕ್ ನಿಂದ ಹೊರಗೆ ಹೋಗಬೇಕಾದರೆ 3-4 ಚೆಕ್ ಗಳಿಗೆ ಹಣದ ಅವಶ್ಯಕತೆಗಾಗಿ ಸಹಿ ಮಾಡಿ ಕೊಡುತ್ತಿದ್ದು ಅದರಲ್ಲಿ ಆರೋಪಿ 1,05,24,476 ರೂಗಳನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ. ಅಂತಹ ಸ್ಥಳವನ್ನು ನಾನು ತೋರಿಸಿದಂತೆ ಪಂಚಮ

ಸಾಕ್ಷಿದಾರರಾದ ರಾಮಮುರ್ತಿ  ಮತ್ತು ಶ್ರೀನಿವಾಸ ರೆಡ್ಡಿ ಎಂಬುವವರು ಇದ್ದು ಅವರ ಸಮಕ್ಷಮ ಪಂಚನಾಮೆ ಮಾಡಿದ್ದು ಆಗ ಸಮಯ 1 ರಿಂದ 2 ಗಂಟೆಯಾಗಿದ್ದು  ಸಹಿ ಪಡೆದಿರುತ್ತಾರೆ.

ದಿಃ03-11-2011 ರಲ್ಲಿ ಎನ್ ಆರ್ ಕಾಲೋನಿ ವಾಸವಿ ಕಲ್ಯಾಣ ಮಂಟಪ ರಸ್ತೆ, ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಬಂದು  ಅಪರಾದಿ ಬಳುತ್ತಿದ್ದ ಕೋಣೆಯಲ್ಲಿ ಪೋಲಿಸ್ ಸಹಾಯಕ ಆಯುಕ್ತರು, ಅವರ ಸಹೋದ್ಯೋಗಿ ಕಛೇರಿಯ ವವಸ್ಥಾಪಕರು ರಾಮಮೂರ್ತಿ, ಶ್ರೀನಿವಾಸರೆಡ್ಡಿ ರವರು ಇದ್ದು,  ಕ್ಯಾಷ್ ರಿಸೀವ್ಡ್ ಎಂಬ ಬ್ಯಾಂಕ್ ಸೀಲ್ ಅನ್ನು ಆರೋಪಿ ನಕಲು ಮಾಡಿದ್ದು ಅಲ್ಲದೆ ಹಿಂದಿನ ಅಧಿಕಾರಿಗಳು ದಾಖಲೆಗಳನ್ನು ತೆಗೆದುಕೊಂಡು ಹೋಗಿರಬಹುದು ಅವರು ತೆಗೆದುಕೊಂಡು ಹೋದ ಬಗ್ಗೆ ನನ್ನ ಬಳಿ ದಾಖಲೆ ಇದೆ ಎಂದು ತೋರಿಸಿದ್ದು ಆ ಹಿಂಬಹರದಲ್ಲಿ ಯಾವುದೇ ಸಹಿ ಇರುವುದಿಲ್ಲ ಆ ವಿಚಾರಕ್ಕೆ ಸಂಬಂಧಿಸಿದಂತೆ 12 ರಿಂದ 1 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ರಾಮಮೂರ್ತಿ ವ್ಯವಸ್ಥಾಪಕರು, ನಾನು ಶ್ರೀನಿವಾಸರೆಡ್ಡಿ ಆ ಸಮಯಕ್ಕೆ ಹಾಜರಿರುತ್ತಾರೆ.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.